ಹಾಕುತ್ತಲೇ ಕುಳಿತುಕೊಂಡೆ.

ಮರಳಿ ಮನೆಯೊಳಗೆ ಕಾಲಿಡುವ ಹೊತ್ತಿಗೆ ಮನಸ್ಸು ಇನ್ನೇನು ಬಿಡಿಸಿಕೊಳ್ಳಲಿರುವ ಒಗಟಿನ ಉತ್ತರಕ್ಕಾಗಿ ಕಾತರವಾಗಿತ್ತು. ಒಳ ಬಂದ ನನ್ನನ್ನು ಬಂದ ವೇಗದಲ್ಲೇ ಬಚ್ಚಲುಮನೆಗೆ ರವಾನಿಸಲಾಯಿತು. ಸುತ್ತಮುತ್ತಲೆಲ್ಲೂ ವೈಷ್ಣವಿಯ ಸುಳಿವೇ ಇರಲಿಲ್ಲ. ಅವಳ ದಿಬ್ಬಣದ ಡ್ರೈವರ್ ನಾನೇ ಎಂಬುದು ಹೊರಗೆ ನಿಂತಿದ್ದ ಭಾಸ್ಕರರಾಯರ ಇನೋವಾವನ್ನು ನೋಡಿದಾಗಲೇ ಅರಿವಾಗಿತ್ತು. ಈಗ ನನ್ನ ಸ್ನಾನಕ್ಕೂ ಗಡಿಬಿಡಿ ಮಾಡುವುದನ್ನು ನೋಡಿದಾಗ ಅದು ಖಾತ್ರಿಯಾಯಿತು. ಬಹುಶಃ ಗಂಡಿಗೆ ಪರಿಚಯವಿರುವ ಯಾರದೋ ಮನೆಯಲ್ಲಿ ಹೆಣ್ಣುನೋಡುವ ಶಾಸ್ತ್ರ ಇಟ್ಟುಕೊಂಡಿದ್ದಾರೆ. ಅಲ್ಲಿಗೆ ಹೊರಡಲಿಕ್ಕೆಂದೇ ಇಷ್ಟೆಲ್ಲ ಗಡಿಬಿಡಿ ಎಂದುಕೊಂಡೆ. ಇಲ್ಲಿ ಇಷ್ಟೆಲ್ಲಾ ಧಾವಂತ ಸೃಷ್ಟಿಸಿರುವ ಆ ರಣಧೀರ ಕುಟುಂಬ ಯಾವುದೆಂದು ಚಿಂತಿಸುತ್ತಲೇ ಸ್ನಾನ ಮುಗಿಸಿ ಹೊರಬಂದವನನ್ನು ಭಾಸ್ಕರರಾಯರ ಗಂಭೀರ ಮುಖ ಎದುರಾಯಿತು.

“ದೇವರಿಗೆ ನಮಸ್ಕಾರ ಮಾಡಿ ಬಾ. ನಿನ್ನ ಜೊತೆ ಮಾತಾಡೋದಿದೆ.”

ಏಕೆ, ಏನು ಎಂಬ ಮರುಪ್ರಶ್ನೆಗಳಿಗೆ ಆಸ್ಪದವೇ ಇಲ್ಲದಷ್ಟು ಗಂಭೀರವಾಗಿತ್ತು ಅವರ ಧ್ವನಿ. ನಡೆಯುತ್ತಿರುವ ಪ್ರಹಸನಗಳೆಲ್ಲದರ ಗುಟ್ಟನ್ನೂ ತಿಳಿದಿರುವ, ನಿಗೂಢ ತುಂಟ ನಗೆ ನಗುತ್ತಾ ನಿಂತಿದ್ದ ಫೋಟೊದ ದೇವರಿಗೆ ನಮಸ್ಕರಿಸಿ ಭಾಸ್ಕರ ರಾಯರು ಇದ್ದಲ್ಲಿಗೆ ಮರಳಿದೆ. ಅವರ ಜೊತೆಗೇ ಅಪ್ಪ ಹಾಗೂ ಅಮ್ಮನೂ ಅಲ್ಲಿ ಕಾಯುತ್ತಾ ನಿಂತಿರುವುದು ನನ್ನ ಕುತೂಹಲಕ್ಕೆ ಎಣ್ಣೆಸುರಿಯಿತು.

‘‘ವೈಷ್ಣವಿಯದೂ ನಿನ್ನದೂ ಜಾತಕ ನೋಡಿಸಿಕೊಂಡು ಬಂದಿದ್ದೇವೆ.’’

ನನಗೆ ನನ್ನ ಕಿವಿಗಳನ್ನೇ ನಂಬಲಾಗಲಿಲ್ಲ. ಇಷ್ಟು ಹೊತ್ತು ನಡೆದಿದ್ದ ರಹಸ್ಯ ಕಾರ್ಯಾಚರಣೆಯ ಮೊದಲ ಬಾಂಬು ನನ್ನ ಬುಡದಲ್ಲೇ ಢಮಾರೆಂದಿತ್ತು.

“ಏನು!? ವೈಷ್ಣವಿ ಹಾಗೂ ನನ್ನ ಜಾತಕವಾ? ಯಾಕೆ?”

ದೀರ್ಘ ಮಾತಿಗೆ ಅನುವಾಗುವವರಂತೆ ಭಾಸ್ಕರರು ಶ್ವಾಸಕೋಶದ ತುಂಬಾ ಉಸಿರೆಳೆದುಕೊಂಡು ಆರಂಭಿಸಿದರು.

“ನೋಡು ವಿಹಾರ್, ಕಾಲ ಯಾರನ್ನೂ ಕಾಯೋದಿಲ್ಲ. ನೀವು, ಈಗಿನಕಾಲದ ಹುಡುಗರಿಗೆ ಅದು ಅರ್ಥವಾಗೋದಿಲ್ಲ. ಏನೋ ಕಡಿದು ಗುಡ್ಡೆ ಹಾಕುವವರಂತೆ ಈಗಲೇ ಮದುವೆ ಬೇಡ, ಇನ್ನೆರೆಡು ವರ್ಷ ಬೇಡ ಅಂತೆಲ್ಲ ವರಾತ ಹೂಡುತ್ತೀರ. ಕೊನೆಗೆ ವಯಸ್ಸು ಮೀರಿದ ಗಡಿಬಿಡಿಯಲ್ಲಿ ಸಿಕ್ಕ ಯಾರಿಗೋ ಸಿಕ್ಕಿಹಾಕಿಕೊಳ್ತೀರ. ನಿಮ್ಮ ವಿಷಯದಲ್ಲಿ ಹಾಗಾಗುವುದು ಬೇಡ. ಹೇಳೀ ಕೇಳೀ ನಿಮ್ಮಿಬ್ಬರದೂ ಹಳೆಯ ಪರಿಚಯ. ಹೊಸದಾಗಿ ಹೊಂದಿಕೊಂಡು ಹೋಗಲಿಕ್ಕೆ ನಿಮ್ಮಿಬ್ಬರಿಗೆ, ಕನಿಷ್ಠ ನಿಮ್ಮ ಮನೆಯವರ ನಡುವೆಯಾದರೂ ಅಂತಹಾ ಅಪರಿಚಿತತೆಯೇನಿಲ್ಲ. ತಂದೆಯಿಲ್ಲದ ಒಬ್ಬಳೇ ಮಗಳನ್ನು ಕಣ್ಣಳತೆಯಲ್ಲೇ ಇರುವ, ಗೊತ್ತಿರುವವರ ಮನೆಗೇ ಕೊಡಬೇಕಂತ ಸುಶೀಲಾಗೂ ಬಹಳ ಆಸೆಯಿತ್ತು. ಅದಕ್ಕೇ ನಾವು ಹಿರಿಯರು ಕೂತು ಈ ಮಾತುಕತೆಯಾಡಿದ್ದೇವೆ. ಅಂಗೈಯಲ್ಲೇ ಇರುವ ಬೆಣ್ಣೆಗೂ ಕಾಯಿಸಬೇಕಿರುವ ತುಪ್ಪಕ್ಕೂ ಜಾತಕ ಕೂಡಿಸಿದ್ದೇವೆ. ಇವತ್ತು ದೇವಸ್ಥಾನದಲ್ಲಿ ನಿಮ್ಮೆದುರೇ ಪ್ರಸಾದ ಕೇಳಿಸುತ್ತೇವೆ. ಹಾಗಂತ ನಿಮ್ಮ ಯಾವ ಇಚ್ಛೆಯನ್ನೂ ಮುರಿಯುವ ಮನಸ್ಸು ನಮಗಿಲ್ಲ. ನಿಮ್ಮಿಮ್ಮ ಬದುಕಿನ ಈ ಪ್ರಮುಖ ನಿರ್ಧಾರವನ್ನು ತೆಗೆದುಕೊಳ್ಳುವ ಅಂತಿಮ ಹೊಣೆಯನ್ನು ನಿಮಗೇ ಬಿಡುತ್ತಿದ್ದೇವೆ. ಇಬ್ಬರಿಗೂ ಇನ್ನೊಂದು ವಾರ ಕಾಲಾವಕಾಶವಿದೆ. ಮುಂದಿನದು ನಿಮಗೇ ಬಿಟ್ಟಿದ್ದು.’’

ಯಾವುದೋ ಸಿನಿಮಾದ ಯಾವುದೋ ಪಾತ್ರವೊಂದರ ಕಥೆಯಲ್ಲಿ ಬರುತ್ತಿದ್ದ ತಿರುವೊಂದು ಈಗ ನನ್ನ ಬದುಕಿನಲ್ಲೇ ಬಂದ ಪರಿಗೆ ಹೇಗೆ ಪ್ರತಿಕ್ರಿಯಿಸಬೇಕೆಂಬುದೇ ತಿಳಿಯದೆ ಭಾಸ್ಕರರ ಮುಖವನ್ನೇ ನೋಡುತ್ತಾ ನಿಂತೆ. ನಾನು ಕೇಳಿಸಿಕೊಂಡಿದ್ದು ನಿಜವಾ? ಮದುವೆಯ ವಿಷಯದಲ್ಲಿ